ಅ) ಶಿವಮೊಗ್ಗ ನಗರದಲ್ಲಿ ಸರ್ಕಾರದ ವತಿಯಿಂದ ಶುಶ್ರೂಷತಾ ತರಬೇತಿ ಶಿಕ್ಷಣ ಕೇಂದ್ರ ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ?

ಆ) ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು?

ಡಾ|| ಎ.ಬಿ. ಮಾಲಕರೆಡ್ಡಿ (ವೈದ್ಯಕೀಯ ಶಿಕ್ಷಣ ಸಚಿವರು) :

ಅ) ಕೇಂದ್ರ ಸರ್ಕಾರದ ಸಹಾಯಧನದಿಂದ ಪ್ರಾರಂಭಿಸುವ ಪ್ರಸ್ತಾವನೆ ಪರಿಶೀಲನೆಯಲ್ಲಿದೆ.

ಆ) ಕೇಂದ್ರ ಸರ್ಕಾರದ ಮಂಜೂರಾತಿ ಬಂದ ನಂತರ ಪ್ರಾರಂಭಿಸಲಾಗುವುದು.

ಕಾರ್ಕಳ ತಾಲ್ಲೂಕಿನ ಹೆಬ್ರಿ ಪದವಿ ಪೂರ್ವ ಕಾಲೇಜು ಕಟ್ಟಡ ಪೂರ್ಣಗೊಳಿಸುವುದು

1190 (1569) ಶ್ರೀ ಗೋಪಾಲ ಭಂಡಾರಿ ಹೆಚ್. (ಕಾರ್ಕಳ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂರು ವರ್ಷಗಳ ಹಿಂದೆ ಕಾರ್ಕಳ ತಾಲ್ಲೂಕಿನ ಹೆಬ್ರಿ ಪದವಿ ಪೂರ್ವ ಕಾಲೇಜಿನ ಕಟ್ಟಡ ಮತ್ತು ಕುಕ್ಕುಜೆ ಪದವಿ ಪೂರ್ವ ಕಾಲೇಜುಗಳಿಗೆ ಕಟ್ಟಡಕ್ಕಾಗಿ ಅನುದಾನವನ್ನು ಆಯವ್ಯಯದಲ್ಲಿ ಒದಗಿಸಲಾಗಿದ್ದು ಕಾಮಗಾರಿಗಳ ಟೆಂಡರ್ ಕರೆದು ಕಾಮಗಾರಿ ಅರ್ಧದಲ್ಲಿ ನಿಲ್ಲಿಸಲು ಕಾರಣವೇನು;

ಆ) ಎಷ್ಟು ಅನುದಾನವನ್ನು ಒದಗಿಸಲಾಗಿತ್ತು; ಎಷ್ಟು ಬಿಡುಗಡೆ ಮಾಡಲಾಗಿದೆ: ಕಾಮಗಾರಿ ಪೂರ್ತಿ ಮಾಡಲು ಏನು ಕ್ರಮ ತೆಗೆದುಕೊಳ್ಳಲಾಗಿದೆ?

ಪ್ರೊ|| ಬಿ.ಕೆ. ಚಂದ್ರಶೇಖರ್ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ರಾಜ್ಯ ಸಚಿವರು):

ಅ) ಉಡುಪಿ ಜಿಲ್ಲೆ ಕಾರ್ಕಳ ತಾಲ್ಲೂಕು, ಹೆಬ್ರಿ ಮತ್ತು ಕುಕ್ಕಜೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳಲ್ಲಿ ಹೆಚ್ಚುವರಿ ಕೊಠಡಿಗಳ ನಿರ್ಮಾಣಕ್ಕೆಂದು ಕ್ರಮವಾಗಿ ರೂ. 12.00ಲಕ್ಷ ಮತ್ತು 6.40 ಲಕ್ಷಗಳ ಅನುದಾನವನ್ನು ಒದಗಿಸಲಾಗಿತ್ತು. ಕಾಮಗಾರಿಗಳು ಮುಕ್ತಾಯ ಹಂತಕ್ಕೆ ಬಂದಾಗ ಕೆಲವು ಸರ್ಕಾರಿ ಪದವಿ ಪೂರ್ವ ಕಾಲೇಜುಗಳ ಕಾಮಗಾರಿಗಳ ತ್ವರಿತವಾಗಿ ಅನುದಾನವನ್ನು ಬಿಡುಗಡೆ ಮಾಡಬೇಕಾಗಿದ್ದುದರಿಂದ ಈ ಎರಡು ಕಾಮಗಾರಿಗಳಿಗೆ ಹಣ ಬಿಡುಗಡೆ ಮಾಡಲಾಗಿಲಿಲ್ಲ.

ಆ)

ಕಾಲೇಜಿನ ಹೆಸರು	ಒದಗಿಸಲಾದ ಮೊತ್ತ	ಬಿಡುಗಡೆ ಮಾಡಿದ ಮೊತ್ತ
ಸ.ಪ.ಪೂ. ಕಾಲೇಜು ಹೆಬ್ರಿ	12.00 ಲಕ್ಷ	1.36 ಲಕ್ಷ
ಸ.ಪ.ಪೂ. ಕಾಲೇಜು ಕುಕ್ಕಜೆ	6.40 ಲಕ್ಷ	-

ಮೇಲ್ಕಂಡ ಎರಡು ಕಾಮಗಾರಿಗಳನ್ನು ಪೂರ್ಣಗೊಳಿಸಲು ಒಟ್ಟು 10.00+7.00 =17.00 ಲಕ್ಷಗಳ ಅವಶ್ಯಕತೆಯಿದ್ದು, ಅನುದಾನದ ಲಭ್ಯತೆಯನ್ನು ಆಧರಿಸಿ ಹಂತ ಹಂತವಾಗಿ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕಾರ್ಕಳ ತಾಲ್ಲೂಕಿನ ಚಾರಾಗ್ರಾಮದಲ್ಲಿ ರತ್ನಾಕವರ್ಣಿ ಸ್ಮಾರಕ ವಿದ್ಯಾಪೀಠದಲ್ಲಿ ತರಬೇತಿ

1191 (1570) ಶ್ರೀ ಗೋಪಾಲ ಬಂಡಾರಿ ಹೆಚ್. (ಕಾರ್ಕಳ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಾರ್ಕಳ ತಾಲ್ಲೂಕಿನ ಚಾರಾಗ್ರಾಮದಲ್ಲಿ ರತ್ನಾಕರವರ್ಣಿ ಸ್ಮಾರಕ ವಿದ್ಯಾಪೀಠವೊಂದು ಅನೇಕ ವರುಷಗಳಿಂದ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ ಈ ಸಂಸ್ಥೆಯು ಎಷ್ಟು ಜನರಿಗೆ ಯಾವ ರೀತಿಯ ತರಬೇತಿಯನ್ನು ನೀಡುತ್ತಿದೆ; (ವಿವರ ನೀಡುವುದು)

ಆ) ಅಲ್ಲಿ ಇರುವ ಸಿಬ್ಬಂದಿಯ ವಿವರ ಮತ್ತು ಅವರಿಗೆ ಒದಗಿಸಲಾಗುವ ಸಂಬಳದ ವಿವರ ಒದಗಿಸುವುದು;

ಇ) ಈ ವಿದ್ಯಾಪೀಠವು ಕಳೆದ 3 ವರ್ಷದಿಂದ ಯಾರಿಗೆ ಎಷ್ಟು ತರಬೇತಿ ನೀಡಿದೆ; ವಿವರ ಒದಗಿಸುವುದು?

ಬಾಬುರಾವ್ ಚವ್ಹಾಣ್ (ವಯಸ್ಕರ ಶಿಕ್ಷಣ, ಗ್ರಂಥಾಲಯ, ಮುದ್ರಣ ಮತ್ತು ಲೇಖನ ಸಾಮಗ್ರಿಗಳ ರಾಜ್ಯ ಸಚಿವರು) :

ಅ) ಹೌದು. ಗ್ರಾಮೀಣ ಯುವಕರಿಗೆ ದ್ವಿಚಕ್ರ ವಾಹನಗಳ ರಿಪೇರಿ ತರಬೇತಿಯನ್ನು ನೀಡಲಾಗುತ್ತಿದೆ. 60 ಜನ ಯುವಕರಿಗೆ ಒಂದು ವರ್ಷಕ್ಕೆ ಎರಡು ತಂಡಗಳಲ್ಲಿ (ತಲಾ 30 ಜನರಿಗೆ) ತರಬೇತಿ ನೀಡಲು ಅವಕಾಶವಿರುತ್ತದೆ.

ಪ್ರಿನ್ಸಿಪಾಲ್	- 00
ವ್ಯವಸಾಯ ಶಿಕ್ಷಕ	- 00
ಕೈಗಾರಿಕಾ ಶಿಕ್ಷಕ	- 00
ಕಛೇರಿ ಸಹಾಯಕ	- 00
ಅಡಿಗೆಯವ	- 00
'ಡಿ' ಗುಂಪು	- 00

ವರ್ಷಕ್ಕೆ ಅಂದಾಜು ರೂ. 3,65,866.00 (ಮೂರು ಲಕ್ಷದ ಅರವತ್ತೈದು ಸಾವಿರದ ಎಂಟು ನೂರ ಅರವತ್ತಾರು ರೂಪಾಯಿಗಳು ಮಾತ್ರ)ಗಳ ಸಿಬ್ಬಂದಿ ವೇತನವನ್ನು ಪಾವತಿಸಲಾಗುತ್ತಿದೆ.

ಇ) ಸದರಿ ವಿದ್ಯಾಪೀಠವು ಕಳೆದ ಮೂರು ವರ್ಷಗಳಲ್ಲಿ ಒಟ್ಟು 64 ಜನ ಗ್ರಾಮೀಣ ಯುವಕರಿಗೆ ತರಬೇತಿಯನ್ನು ನೀಡಿದೆ. ಅದರ ವಿವರ ಹೀಗಿದೆ:

1999-2000	- 20
2000-2001	- 31
2001-2002	- 09

ಮೈಸೂರು ಜಿಲ್ಲೆಯಲ್ಲಿ ಸಾಕ್ಷರತ ಕಲಿಕಾ ಕೇಂದ್ರ

1193 (1438) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ವಯಸ್ಕರ ಶಿಕ್ಷಣ, ಗ್ರಂಥಾಲಯಗಳು, ಮತ್ತು ಮುದ್ರಣ ಹಾಗೂ ಲೇಖನ ಸಾಮಗ್ರಿಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೈಸೂರು ಜಿಲ್ಲೆಯಲ್ಲಿ ಕಲಿಕಾ ಕೇಂದ್ರದ ಸಾಮಗ್ರಿಗಳನ್ನು ಕೊಳ್ಳುವಿಕೆಯಲ್ಲಿ ಅಕ್ರಮಗಳು ನಡೆದಿದೆ ಎಂಬ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹೌದಾದರೆ ಈ ಬಗ್ಗೆ ಯಾವ ರೀತಿ ತನಿಖೆ ಕೈ ಗೊಳ್ಳಲಾಗಿದೆ?